


‘ಸೂಪರ್ ಸಾನಿಕ್ ವೇಗ’ದ ಪ್ರಯಾಣಕ್ಕೆ ಇದೋ ಇಲ್ಲಿದೆ ಹೊಸ ಪ್ರಸ್ತಾಪ. ಹೈಪರ್‌ಲೂಪ್ ಸಾರಿಗೆ ಎನ್ನುವುದು ಈ ಶತಮಾನದ ಅತಿದೊಡ್ಡ ಸಾರಿಗೆ ಕ್ರಾಂತಿಗೆ ನಾಂದಿ ಹಾಡಲಿದೆ.

■ ಸಂತೋಷ್ ರಾವ್ ಪೆರ್ಮುಡ




ಮುಂಭಾಗ ಮತ್ತು ಹಿಂಭಾಗದಲ್ಲಿ ಜೋಡಿಸಲಾಗುತ್ತದೆ. ಈ ಮೂಲಕ ವಾರ್ಷಿಕವಾಗಿ ಸುಮಾರು 15000 ದಶಲಕ್ಷ ಪ್ರಯಾಣಿಕರ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವ ಗುರಿಯೊಂದನ್ನು ಹೈಪರ್‌ಲೂಪ್ ಸಂಸ್ಥೆ ಹೊಂದಿದೆ. ಈ ಯೋಜನೆಯನ್ನು ಪ್ರಾರಂಭಿಕ ಹಂತದಲ್ಲಿ ಮಹಾನಗರಗಳನ್ನು ಸಂಪರ್ಕಿಸಲಷ್ಟೇ ಬಳಸಲು ಉದ್ದೇಶಿಸಲಾಗಿದ್ದು, ನಂತರದ ದಿನಗಳಲ್ಲಿ ಮಧ್ಯಮ ಹಂತದ ನಗರಗಳಲ್ಲೂ ಅನುಷ್ಠಾನಿಸಲು ಉದ್ದೇಶಿಸಲಾಗಿದೆ.

## ಹೈಪರ್‌ಲೂಪ್‌ನ ವೈಶಿಷ್ಟ್ಯ

ಈ ಪ್ರಕಾರದ ಸಾರಿಗೆ ಕೊಳವೆಯ ಒಳಭಾಗದಲ್ಲಿ ಇರುವುದರಿಂದ ಪ್ರಾಕೃತಿಕ ವಿಕೋಪಗಳಾದ ಮಳೆ, ಗಾಳಿ, ಮಂಜು ಇತ್ಯಾದಿ ಯಾವುದೇ ಅಡೆತಡೆಗಳು ಇದಕ್ಕಿರುವುದಿಲ್ಲ. ಹೈಪರ್‌ಲೂಪ್ ಕ್ಯಾಪ್ಸೂಲ್‌ನಲ್ಲಿ 24 ಗಂಟೆಗೂ ಹೆಚ್ಚು ಅವಧಿಗೆ ಸಾಕಾಗುವಷ್ಟು ಇಂಧನ ಸಂಗ್ರಹಣಾ ಸಾಮರ್ಥ್ಯ ಇರುವುದರಿಂದ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆಯೂ ಅತ್ಯಂತ ಕಡಿಮೆ. ದಿನದ 24 ಗಂಟೆಯೂ ಇದು ಪ್ರಯಾಣಿಕರ ಬಳಕೆಗೆ ಲಭ್ಯವಿರಲಿದೆ.

ಈ ಸಾರಿಗೆಯಲ್ಲಿ ಜೆಟ್ ಎಂಜಿನ್‌ನನ್ನು ಅಳವಡಿಸಲಾಗುತ್ತಿದ್ದು ಸಾಮಾನ್ಯ ವಿಮಾನದ ವೇಗಕ್ಕಿಂತ ದುಪಟ್ಟು ವೇಗದಲ್ಲಿ ಚಲಿಸುವ ಸಾಮರ್ಥ್ಯವನ್ನು ಹೊಂದಲಿದೆ. ಇದನ್ನು ರಸ್ತೆ ಸಾರಿಗೆ ವ್ಯವಸ್ಥೆಗೆ ಹೋಲಿಸಿದಾಗ ಸ್ವಲ್ಪ ವೆಚ್ಚದಾಯಕ ಎಂದೆನಿಸಿದರೂ ಅತ್ಯಂತ ವೇಗವಾಗಿ ನಿರ್ದಿಷ್ಟ ಗಮ್ಯಸ್ಥಾನವನ್ನು ತಲುಪುವುದರೊಂದಿಗೆ ಪರಿಸರ ಮಾಲಿನ್ಯದಿಂದ ಬಹುಪಾಲು ಇದು ಮುಕ್ತ-ವಾಗಿದ್ದು, ಹೈಪರ್‌ಲೂಪ್ ಸಾರಿಗೆಯನ್ನು ಈ ಮೂರು ವಿಧದ ಪ್ರಮುಖ